ಚೀಫ್ ಇಂಜಿನಿಯರ್‌ರವರನ್ನು ಕರೆಯಿಸಿ ಮಾತನಾಡಿದ್ದೇವೆ. 35 ಲಕ್ಷ ರೂಪಾಯಿ ಹಣ ಕಾರ್ಪೊರೇಷನ್‌ನವರು ತುಂಬುವಂಥದ್ದು ಏನು ಇದೆ ಅದನ್ನು ವರ್ಕ್ಸ್ ಎಕ್ಸಿಕ್ಯೂಟ್ ಮಾಡಿ ಒಂದು ಎಕ್ಸ್‌ಪ್ರೆಸ್ ಫೀಡರ್ ಹಾಕಿ ಕೊಡಬೇಕು ಎಂದು ಹೇಳಿದ್ದೇವೆ. ನಾನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಆ ಎಕ್ಸ್‌ಪ್ರೆಸ್ ಫೀಡರ್ ವ್ಯವಸ್ಥೆ ಏನಾಗಿದೆ ಎಂದು ತಿಳಿದುಕೊಂಡು ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ವಿತರಣೆ ಮಾಡುವಂತೆ ಕಾರ್ಪೊರೇಷನ್‌ಗೆ ತಿಳಿಸಿ ಆ ವ್ಯವಸ್ಥೆಯನ್ನು ಸರಿ ಮಾಡಿಸಿಕೊಡುತ್ತೇನೆ.

ಚ) ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸ್ವಾತಂತ್ರ್ಯ ಯೋಧರಿಗೆ ಸೌಲಭ್ಯ

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕೆ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ಸ್ವಾತಂತ್ರ್ಯ ಯೋಧರಿಗೆ ಪ್ರಯಾಣ ಮಾಡಲಿಕ್ಕೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ನಮ್ಮ ಕಡೆಯವರು ತಿರುಪತಿ, ಶ್ರೀಶೈಲಂ ಹಾಗೂ ಮಂತ್ರಾಲಯಕ್ಕೆ ಹೋಗುತ್ತಿದ್ದಾರೆ. ಆದರೆ ಅವರು ಕರ್ನಾಟಕ ಬಸ್ಸಿನಲ್ಲಿ ಹೋದರೆ ಕರ್ನಾಟಕ ಬಾರ್ಡರ್ ಬಂದ ಕೂಡಲೇ ಅವರನ್ನು ಇಳಿಸುತ್ತಾರೆ. ಅವರು ಕರ್ನಾಟಕದಲ್ಲಿ ಮಾತ್ರ ಪ್ರವಾಸ ಮಾಡಬೇಕು ಎಂದು ಆದೇಶ ಇದೆ. ಆದರೆ ಕರ್ನಾಟಕದವರ ಬಸ್ಸು ತಿರುಪತಿಗೂ, ಮಂತ್ರಾಲಯಕ್ಕೂ ಶ್ರೀಶೈಲಕ್ಕೂ ಹೋಗುತ್ತವೆ. ಅದಕಾರಣ ನಮ್ಮ ಕರ್ನಾಟಕದ ಬಸ್ಸು ಎಲ್ಲಿಯವರೆಗೆ ಹೋಗುತ್ತವೆ, ಅಲ್ಲಿಯವರೆಗೆ ಅವರಿಗೆ ಪ್ರಯಾಣ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಅದರ ಜೊತೆಗೆ ಮಾನ್ಯ ಸಾರಿಗೆ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಅದು ಏನೆಂದರೆ ಸ್ವಾತಂತ್ರ್ಯ ಯೋಧರಿಗೆ ಈಗಾಗಲೇ ವಯಸ್ಸಾಗಿದೆ ಆದಕಾರಣ ಅವರಿಗೆ ಒಂದು ಕಂಪ್ಯಾನಿಯನ್‌ನ್ನು ತೆಗೆದುಕೊಂಡು ಹೋಗಲು ಅವಕಾಶ ಮಾಡಿ ಕೊಡುತ್ತೇನೆ ಎಂದು. ಆದರೆ ಅದು ಇದುವರೆಗೆ ಇಂಪ್ಲಿಮೆಂಟ್ ಆಗಿಲ್ಲ. ಆದಕಾರಣ ಇವೆರಡನ್ನು ಮುಂದಿನ ಆಗಸ್ಟ್ ಹದಿನೈದರ ಒಳಗಾಗಿ ಇಂಪ್ಲಿಮೆಂಟ್ ಆದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಯೋದರಿಗೆ ಕರ್ನಾಟಕದ ಬಸ್ಸಿನಲ್ಲಿ ಪ್ರಯಾಣ ಮಾಡಲಿಕ್ಕೆ ಅವಕಾಶ ಇದೆ, ಆದರೆ ಅವರನ್ನು ಬಾರ್ಡರ್ ಬಂದ ತಕ್ಷಣ ಇಳಿಸುತ್ತಾರೆ, ಅಲ್ಲಿಂದ ಮುಂದಕ್ಕೆ ಅವರನ್ನು ಪ್ರಯಾಣ ಮಾಡುವ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಮುಂಚೆ ನಮ್ಮ ಶಾಸಕರಿಗೂ ಕೂಡ ಇದೇ ರೀತಿ ಇತ್ತು. ಅದನ್ನು ಸ್ವಲ್ಪಮಟ್ಟಿಗೆ ತಿದ್ದುಪಡಿ ಮಾಡಿದ್ದೇವೆ. ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

ಶ್ರೀ ಡಿ. ಆರ್. ಪಾಟೀಲ್ : ಅದರಲ್ಲಿ ವಿಚಾರ ಮಾಡುವುದು ಏನು ಇದೆ? ಮಾಡುತ್ತೇವೆ ಎಂದು ಹೇಳಿ.

ಶ್ರೀ ಎಂ. ಸಿ. ನಾಣಯ್ಯ : ಅದರ ಬಗ್ಗೆ ಕೆ. ಎಸ್. ಆರ್. ಟಿ. ಸಿ. ಯವರ ಜೊತೆ ಹಾಗೂ ಮಂತ್ರಿಗಳ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಮತ್ತು ಅದರಿಂದ ಹಣಕಾಸಿನ ತೊಂದರೆ ಎಷ್ಟಾಗುತ್ತದೆ ಎಂದೂ ಕೂಡ ನೋಡಬೇಕಾಗುತ್ತದೆ. ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಡಿ. ಆರ್. ಪಾಟೀಲ್ : ನಾಳೆ ಸದನಕ್ಕೆ ತಿಳಿಸುತ್ತೇನೆ ಎಂದು ಹೇಳಿ.

ಶ್ರೀ ಎಂ. ಸಿ. ನಾಣಯ್ಯ : ಸ್ವಾತಂತ್ರ್ಯ ಯೋಧರು ಬಹಳ ಕಡಿಮೆ ಇರತಕ್ಕಂಥ ಜನರು ಅವರ ಬಗ್ಗೆ ವಿಚಾರ ಮಾಡೋಣ. ನಾವು ನೀವು ಜೊತೆಯಲ್ಲಿಯೇ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಡಿ. ಆರ್. ಪಾಟೀಲ್ : ನಾಳೆ ಅಥವಾ ನಾಡಿದ್ದು ಸದನಕ್ಕೆ ತಿಳಿಸುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ : ನಾಳೆ ನಾಡಿದ್ದು ಎಂದು ಹೇಳಬೇಡಿ. ಅದಕ್ಕೆ ಸ್ವಲ್ಪ ಸಮಯ ಇದೆ.

ಜ) ಶಿವಮೊಗ್ಗ ಆರೋಗ್ಯ ಅಧಿಕಾರಿಗಳ ಕಛೇರಿಯ ಗೋಡಾನ್‌ಗೆ ಬೆಂಕಿ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನೆನ್ನೆ ಬೆಳಗಿನ ಜಾವ ಶಿವಮೊಗ್ಗ ಜಿಲ್ಲೆಯ ಆರೋಗ್ಯ ಅಧಿಕಾರಿಗಳ ಕಚೇರಿಯ ಔಷಧದ ಗೋಡಾನ್‌ಗೆ ಬೆಂಕಿ ಬಿದ್ದಿದೆ. ಸುಮಾರು 20ಲಕ್ಷ ರೂಪಾಯಿಗಳ ಔಷಧಿ ಮತ್ತು ಸಂಬಂಧಪಟ್ಟ ದಾಖಲಾತಿಗಳು ನಾಶವಾಗಿದೆ. ಎರಡು ದಿವಸ ಮೊದಲಷ್ಟೇ ಶನಿವಾರದ ದಿವಸ ಜಿಲ್ಲಾಪರಿಷತ್ತಿನಲ್ಲಿ ಗೋಡಾನ್‌ನಲ್ಲಿ ಇದ್ದಂಥ ಸಿಬ್ಬಂಧಿಯವರ ಮೇಲೆ ಅನುಮಾನ ಇದೆ, ಅಲ್ಲಿರತಕ್ಕಂಥ ಔಷಧಿಗಳನ್ನು ಓಪನ್ ಮಾರ್ಕೆಟ್‌ನಲ್ಲಿ ಅವರು ಮಾರಾಟ ಮಾಡುತ್ತಿದ್ದಾರೆ, ಬೇರೆ ಬೇರೆ ಆಸ್ಪತ್ರೆಗಳಿಗೆ ಹೋಗತಕ್ಕಂಥ ಔಷಧಿಯನ್ನು ಅಲ್ಲೇ ಇಟ್ಟು, ಅಲ್ಲಿರತಕ್ಕಂಥ ಬೇರೆ ಬೇರೆ ಔಷಧಿಗಳನ್ನು ತೆಗೆದುಕೊಂಡು ಹೋಗಲಿಕ್ಕೆ ಬರತಕ್ಕಂಥ ಸಿಬ್ಬಂಧಿಯವರಿಗೆ ಹಣ ಕೊಟ್ಟು ಆ ಔಷಧಿಗಳನ್ನು ಬೇರೆ ಪ್ರೈವೇಟ್ ಪ್ರಾ್ಯಕ್ಟೀಸ್ ಮಾಡುವವರಿಗೆ ಮಾರುತ್ತಿದ್ದಾರೆಂದು ಪೂರ್ಣವಾಗಿ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಆ ಗೋಡಾನ್‌ನ್ನು ಚೆಕ್ ಮಾಡಬೇಕೆಂದು ಒಂದು ಸಮಿತಿಯನ್ನು ಮಾಡಿದರು. ಆದರೆ ಸಮಿತಿ ನೇಮಕವಾದ ಮೂರನೇ ದಿವಸ ಗೋಡಾನ್‌ಗೆ ಬೆಂಕಿ ಬಿದ್ದಿದೆ. ಇವೊತ್ತು ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ಬಿದ್ದಿದೆ ಎಂದು ರೆಕಾರ್ಡ್ ಮಾಡುವ ಎಲ್ಲಾ ಪ್ರಯತ್ನಗಳು ನಡೆದಿವೆ. ಅಲ್ಲಿರತಕ್ಕಂಥ ಸಿಬ್ಬಂದಿ ಅಲ್ಲೇ ಸುಮಾರು ಎಂಟು ಹತ್ತು ವರ್ಷದಿಂದ ಇದ್ದಾರೆ. ಅಲ್ಲಿ ನಡೆಯತಕ್ಕಂಥ ಅವ್ಯವಹಾರದಲ್ಲಿ ಅವರು ಶಾಮೀಲಾಗಿದ್ದಾರೆ ಎಂದು ಇಡೀ ಶಿವಮೊಗ್ಗ ಜಿಲ್ಲೆಯ ಜನತೆಗೆ ಗೊತ್ತಿದೆ. ದಯಮಾಡಿ ಇದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು. ಇಪ್ಪತ್ತು ಲಕ್ಷ....

ಅಧ್ಯಕ್ಷರು : ಸಮಿತಿ ನೇಮಕ ಮಾಡಿದ ಮೇಲೆ ಬೆಂಕಿ ಬೀಳುವುದಕ್ಕಿಂತ ಶಾರ್ಟ್‌ಸ್ಟ್ ಸರ್ಕ್ಯೂಟ್ ಇನ್ನು ಯಾವುದು ಇದೆ ಹೇಳಿ?

ಶ್ರೀ ಅರಗ ಜ್ಞಾನೇಂದ್ರ : ಇದು ಮೇಲ್ನೋಟಕ್ಕೆ ನೇರವಾಗಿ ಬೇಕೆಂತಲೇ ಮಾಡಿದ್ದಾರೆ ಎಂದು ಸಾಬೀತಾಗುತ್ತದೆ. ವಿವಿಧ ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಹೋಗಬೇಕಾದ ಔಷಧಿಗೆ ಇವೊತ್ತು ಬೆಂಕಿ ಬಿದ್ದಿದೆ.....

ಅಧ್ಯಕ್ಷರು : ಈಗಾಗಲೇ ಅದರ ಬಗ್ಗೆ ಹೇಳಿದ್ದೀರಿ. ಅದರ ಬಗ್ಗೆ ಸರ್ಕಾರದಿಂದ ಉತ್ತರ ಕೇಳೋಣ. ನಿಮ್ಮ ವಿಷಯ ಏನು ಎಂದರೆ, ಇನ್‌ವೆಸ್ಟಿಗೇಷನ್ ಕಮಿಟಿ ಮಾಡಿದ ತಕ್ಷಣ ಬೆಂಕಿ ಬಿದ್ದಿದೆ ಎಂದು.

ಶ್ರೀ ಅರಗ ಜ್ಞಾನೆಂದ್ರ : ಅಷ್ಟೇ ಅಲ್ಲ ಮಾನ್ಯ ಅಧ್ಯಕ್ಷರೆ, ಅಲ್ಲಿ ಡಿ. ಹೆಚ್. ಓ. ಇಲ್ಲದೆ ಒಂದು ವರ್ಷ ಆಗಿದೆ. ಅದರ ಬಗ್ಗೆ ಜಿಲ್ಲಾ ಪರಿಷತ್ತಿನಲ್ಲಿ ಚರ್ಚೆಯಾಗಿದೆ. ರೆಸಲ್ಯೂಷನ್ ಆಗಿದೆ. ಈಗಾಗಲೇ....

ಅಧ್ಯಕ್ಷರು : ಮೊದಲು ಫೈಯರ್ ಎಕ್ಸಿಟಿಂಗ್ವಿಷರ್ ಕಳುಹಿಸೋಣ, ಬೆಂಕಿಯನ್ನು ನಂದಿಸಿ ಬಿಡೋಣ. ನಂತರ ಡಿ. ಹೆಚ್. ಓ.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ವರದಿಯಾಗಿದ್ದು ನನ್ನ ಗಮನಕ್ಕೆ ಬಂದಿದೆ. ತಕ್ಷಣ ನಾನು ಇವೊತ್ತು ನಾಳೆಯೋ ಎರಡು ದಿವಸಗಳಲ್ಲಿ ವರದಿಯನ್ನು ತರಿಸಿ ಸಮಗ್ರವಾಗಿ ಸದನದ ಮುಂದೆ ಹೇಳುತ್ತೇನೆ.